ನೀರಿಗಾಗಿ ಹೋರಾಟ ಮಾಡುತ್ತೇವೆ, ಅದನ್ನು ಬಿಟ್ಟುಕೊಡುವುದಿಲ್ಲ ಎಂಬ ದಿಟ್ಟ ಮಾತನ್ನು ಕೂಡ ಹೇಳಿದ್ದಾರೆ. ಆದ್ದರಿಂದ ಕಾವೇರಿ ಬಗ್ಗೆ ಹೇಳಿಲ್ಲ.

ಕೃಷ್ಣ ನೀರಿನ ಬಗ್ಗೆ ಹೇಳಿಲ್ಲ, ರೈತರ ಬಗ್ಗೆ ಹೇಳಿಲ್ಲ ಎಂಬ ಈ ಬರೀ ಟೀಕೆಗಳನ್ನು ಬಿಟ್ಟು ಇಲ್ಲಿ ಏನು ಹೇಳಿದ್ದಾರೆ ಆ ಪ್ರತಿಯೊಂದನ್ನೂ ಕೂಡ ನಾವು ಮಂಥನ ಮಾಡಿ ನೋಡಿದರೆ ಬರೀ ರೈತರಿಗೆ ಅಲ್ಲ, ಇತರ ಪ್ರದೇಶಗಳಿಗೂ ಕೂಡ ನಗರ ಪ್ರದೇಶಗಳಿಗೂ ಕೂಡ ಅನ್ವಯವಾಗುವ ಅನೇಕ ಮಾತುಗಳನ್ನು ಹೇಳಿದ್ದಾರೆ. ಅದರಲ್ಲೂ ನಗರಪ್ರದೇಶಗಳಲ್ಲಿ ಪಾರ್ಟ್ ಎಲಿವೇಷನ್ ಪೈಲೆಟ್ ಪ್ರಾಜೆಕ್ಟ್, ನೆರ್‌ಲೆಂದ ಧನಸಹಾಯ ಪಡೆದು ಯೋಜನೆಗಳ ಲಾಭ ನಗರಪ್ರದೇಶಗಳ ಬಡವರಿಗೂ ಕೂಡ ಆಗುತ್ತದೆ. ಹೀಗೆ ನಗರ ಮತ್ತು ಗ್ರಾಮೀಣ ಪ್ರದೇಶಗಳಿರಡರ ಸಮನ್ವಯ ದೃಷ್ಟಿಯಿಂದ ಕಾಣತಕ್ಕಂಥ ಯೋಜನೆ ರೂಪಿಸುವಂತಹ ಈ ಒಂದು ರಾಜ್ಯಪಾಲರ ಭಾಷಣಕ್ಕಾಗಿ ವಂದನೆಯನ್ನು ಸಲ್ಲಿಸುತ್ತಾ, ಒಂದು ಮಾತನ್ನು ಮಾನ್ಯ ಸ್ನೇಹಿತರಲ್ಲಿ ನಿವೇದಿಸಬಯಸುತ್ತೇನೆ: ಏನೆಂದರೆ, ಇದು ಯಾರೋ ಒಬ್ಬರ ಕಾರ್ಯವಲ್ಲ, ಇಡೀ ಸಮಾಜ, ಇಡೀ ಪ್ರತಿನಿಧಿಗಳು, ಇಡೀ ಸರ್ಕಾರ ಎಲ್ಲರೂ ಒಂದಾಗಿ ಈ ಕನ್ನಡತಾಯಿಯ ಭುವನೇಶ್ವರಿಯ ಅಭಿವೃದ್ಧಿಯ ರಥವನ್ನು ಎಳೆಯುವಂತಹ ಕಾರ್ಯದಲ್ಲಿ ಸಹಭಾಗಿಗಳಾಗಬೇಕು. ಇದರಲ್ಲಿ ಯಾರಾದರೂ ಸ್ವಂತ ಪ್ರತಿಷ್ಠೆ ಬೆಳಿಸಿಕೊಳ್ಳುವ ಕಾರ್ಯಕ್ಕೆ ಕೈಹಾಕುವುದು ಸರಿಯಲ್ಲವೆಂದು ಹೇಳುತ್ತೇನೆ.

ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳುತ್ತೇನೆ. ಕೆಲವರು ಪ್ರತಿಯೊಂದಕ್ಕೂ ಕೂಗಾಡುವುದು ಅಡ್ಡಿ ಮಾಡುವುದು ಹೀಗೆ ಮಾಡುತ್ತಾರೆ. ಇದನ್ನು ನೋಡಿ ನನಗೆ ಡಿ.ವಿ.ಜಿ.ಯವರ ಒಂದು ಪದ್ಯ ನೆನಪಿಗೆ ಬರುತ್ತದೆ. ಅದು ಏನೆಂದರೆ, "ಎದ್ದೆದ್ದು ಬೀಳುತಿಹೆ ಗುದ್ದಾಡಿ ಸೋಲುತಿಹೆ, ಗದ್ದಲವನು ತುಂಬಿ ಪ್ರಸಿದ್ಧನಾಗುತಿಹೆ ಉದ್ಧರಿಸುವೆನು ಜಗವನೆನುತಿಹೆ ಸಖನೆ ನಿನ್ನ ಉದ್ಧಾರವೆಷ್ಟಾಯಿತೋ ಮಂಕುತಿಮ್ಮ" ಎಂದು ಹೇಳಿದ್ದಾರೆ. ಇದನ್ನು ಯಾರು ಮಾಡುತ್ತಾರೋ ಅವರಿಗೆ ಆಗುತ್ತದೆ. ಆದ್ದರಿಂದ ಎದ್ದೆದ್ದು ಬೀಳದೆ ಗುದ್ದಾಡಿ ಸೋಲದೆ ಗದ್ದಲವನ್ನು ಮಾಡದೇ ಜಗದ ಉದ್ಧಾರವನ್ನು ಮಾಡುತ್ತೇನೆಂದು ಹೇಳಿ ತನ್ನ ಉದ್ಧಾರವನ್ನು ಮಾಡಿಕೊಳ್ಳಲಿಕ್ಕೆ ಹೊರಟಿರತಕ್ಕಂತಹವರ ಬಗ್ಗೆ ಇದರಲ್ಲಿ ಹೇಳಿದ್ದಾರೆ. ಈ ಒಂದು ರೀತಿಯ ವಿವಿಧ ನಡವಳಿಕೆಯನ್ನು ಬಿಟ್ಟು ಇನ್ನು ಮೇಲಾದರೂ ಸಹಕರಿಸಿ ಕನ್ನಡ ತಾಯಿಯ ರಥವನ್ನು ಅಭಿವೃದ್ಧಿಯ ಪಥದಲ್ಲಿ ಎಳೆಯುವುದಕ್ಕೆ ಸಹಕರಿಸಬೇಕೆಂದು ವಿನಂತಿಸಿ ಈ ರಾಜ್ಯಪಾಲರ ಭಾಷಣದ ವಂದನಾ ನಿರ್ಣಯವನ್ನು ಮಂಡಿಸಿರತಕ್ಕಂತಹ ಶಿವನಂಜಪ್ಪನವರಿಗೆ ವಂದಿಸಿ ತಮಗೂ ವಂದಿಸಿ ನಾನು ಇದನ್ನು ಅನುಮೋದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ರಾಜ್ಯಪಾಲರ ಭಾಷಣದ ವಂದನಾ ನಿರ್ಣಯಕ್ಕೆ ತಿದ್ದುಪಡಿ ಮಂಡನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ: ಮಾನ್ಯ ಅಧ್ಯಕ್ಷರೆ, ಮಾನ್ಯ ರಾಜ್ಯಪಾಲರ ಭಾಷಣಕ್ಕೆ ನಾನು ಈ ಕೆಳಕಂಡ ತಿದ್ದುಪಡಿಯನ್ನು ಸೂಚನೆ ಮಾಡುತ್ತೇನೆ. ಕೇಂದ್ರ ಸರಕಾರದವರು ಜನಸಾಮಾನ್ಯರು ಉಪಯೋಗಿಸುತ್ತಿರುವ ಅಕ್ಕಿ ಗೋಧಿ, ಪೆಟ್ರೋಲ್, ಡೀಸೆಲ್ ಬೆಲೆಗಳನ್ನು ಇತ್ತೀಚೆಗೆ ವಿಪರೀತವಾಗಿ ಏರಿಸಿರುವುದರಿಂದ ಸಾಮಾನ್ಯ ಜನತೆಗೆ, ಕಾರ್ಮಿಕರಿಗೆ ಕೂಲಿ ಕೆಲಸ ಮಾಡುವವರಿಗೆ ದಿನನಿತ್ಯ ಜೀವನ ನಡೆಸುವುದು ದುಸ್ತರವಾಗಿರುವುದರಿಂದ ಕೇಂದ್ರ ಸರಕಾರ ಈ ಬೆಲೆಗಳನ್ನು ಇಳಿಸಲು ಕ್ರಮ ತೆಗೆದುಕೊಳ್ಳಲು ಆಗ್ರಹಪಡಿಸಬೇಕಾಗಿದೆ."

ಉಪಾಧ್ಯಕ್ಷರು : ಪ್ರಸ್ತಾವವನ್ನು ಮಂಡಿಸಲಾಗಿದೆ.

ಶ್ರೀ ಹೆಚ್. ವಿಕಾಂತಯ್ಯ: ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಪ್ರಸ್ತಾವದ ಮೇಲೆ ಈ ಕೆಳಗಿನ ತಿದ್ದುಪಡಿಯನ್ನು ಸೂಚಿಸಲು ಬಯಸುತ್ತೇನೆ. ಪ್ರಸ್ತಾವದ ಕೊನೆಯಲ್ಲಿ ಈ ಕೆಳಕಂಡಂತೆ ಸೇರಿಸುವುದು."ಆದರೆ ಆಡಳಿತ ಪಕ್ಷದಲ್ಲಿ ನಡೆದ ಯಾದವೀ ಕಲಹ ರಾಜ್ಯದ ಆಡಳಿತದ ಮೇಲೆ ಬೀರಿದ ದುಷ್ಪರಿಣಾಮದ ಬಗ್ಗೆ ಪ್ರಸ್ತಾಪಿಸದೇ ಇರುವುದಕ್ಕೆ ಈ ಸದನ ವಿಷಾದಿಸುತ್ತದೆ".

ಉಪಾಧ್ಯಕ್ಷರು: ಪ್ರಸ್ತಾವವನ್ನು ಮಂಡಿಸಲಾಗಿದೆ.

ಶ್ರೀ ಬಾಬಾಗೌಡ ರುದ್ರಗೌಡ ಪಾಟೀಲ್: ಮಾನ್ಯ ಅಧ್ಯಕ್ಷರೆ, ವಂದನಾರ್ಪಣ ಭಾಷಣದ ಕೊನೆಗೆ ಈ ತಿದ್ದುಪಡಿಯನ್ನು ಸೂಚಿಸುತ್ತೇವೆ. "ಆದರೆ ಅತ್ಯಂತ ದುಃಖದಿಂದ ಹೇಳುವುದೇನೆಂದರೆ, ಭಾರತ ಸರಕಾರದ ಹೊಸ ಆರ್ಥಿಕ ಉದಾರ ನೀತಿ ಮತ್ತು ಪ್ರಮುಖ ಆರ್ಥಿಕ ಹೊಸ ನೀತಿಗಳು ಕರ್ನಾಟಕ ಸರಕಾರ ಯೋಜಿಸಿದ ಅಲ್ಪಸಂಖ್ಯಾತರ ಪರಿಶಿಷ್ಟ ಜಾತಿ ಪಂಗಡಗಳ ಹೆಣ್ಣುಮಕ್ಕಳ ಕಲ್ಯಾಣ ಕಾರ್ಯಕ್ರಮಗಳನ್ನು ಜಾರಿಗೊಳಿಸುವ ರಾಜ್ಯ ಸರಕಾರದ ಅಧಿಕಾರದ ಮೇಲೆ ನಿಷೇಧಾತ್ಮಕ ಪರಿಣಾಮಗಳನ್ನು ಬೀರುತ್ತವೆ ಅಲ್ಲದೆ ಬೆಳೆಯುತ್ತಿರುವ ನಿರುದ್ಯೋಗವನ್ನು ತಡೆಯಲೂ ಸಹ ಪ್ರತಿಕೂಲ ಪರಿಣಾಮಗಳನ್ನು ಬೀರುತ್ತವೆ"

ಉಪಾಧ್ಯಕ್ಷರು: ಪ್ರಸ್ತಾವನೆಯನ್ನು ಮಂಡಿಸಲಾಗಿದೆ.

ಪ್ರಕಟಣೆ

ಉಪಾಧ್ಯಕ್ಷರು: ವಿಧಾನ ಪರಿಷತ್ತಿನ ಸಭಾಪತಿಯವರಿಂದ ಈ ಕೆಳಕಂಡ ಸಂದೇಶ ಬಂದಿದೆ. ಕರ್ನಾಟಕ ವಿಧಾನಪರಿಷತ್ತಿನ ಕಾರ್ಯ ವಿಧಾನ ಹಾಗೂ ನಡವಳಿಕೆಯ ನಿಯಮ 114 ರ ಮೇರೆಗೆ ವಿಧಾನ ಸಭೆಯಿಂದ ಅಂಗೀಕೃತವಾದ ಈ ಕೆಳಕಂಡ ವಿಧೇಯಕಗಳನ್ನು ಕರ್ನಾಟಕ ವಿಧಾನ ಪರಿಷತ್ತಿನಲ್ಲಿ ದಿನಾಂಕ 9-2-94 ರಂದು ಅನುಮೋದಿಸಲಾಯಿತೆಂದು ತಿಳಿಸುತ್ತೇನೆ:-

1. ಕರ್ನಾಟಕ ಸಿವಿಲ್ ನ್ಯಾಯಾಲಯಗಳ ತಿದ್ದುಪಡಿ ವಿಧೇಯಕ 1993
2. ಕರ್ನಾಟಕ ಅಬಕಾರಿ ತಿದ್ದುಪಡಿ ವಿಧೇಯಕ 1993
3. ಕರ್ನಾಟಕ ಅಬಕಾರಿ 2ನೇ ತಿದ್ದುಪಡಿ ವಿಧೇಯಕ 1993

ಒಬ್ಬ ಮಾನ್ಯ ಸದಸ್ಯರು: ಮಾನ್ಯ ವಾಟಾಳ್‌ರವರು ವೆಲ್ಲಲ್ಲಿ ಕುಳಿತಿದ್ದಾರೆ. ಮಾನ್ಯ ಮುಖ್ಯ ಮಂತ್ರಿಗಳು ಭರವಸೆ ಕೊಟ್ಟು, ಅವರನ್ನು ಸ್ಥಳಕ್ಕೆ ಕಳಿಸಿಕೊಡಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ: ಮಾನ್ಯ ಉಪಾಧ್ಯಕ್ಷರೇ, ಹಿರಿಯ ಸದಸ್ಯರಾದ ಹಾಗೂ ಕನ್ನಡ ಚಳುವಳಿಗೆ ತಳಹದಿ ಹಾಕಿದಂತಹ ವಾಟಾಳ್ ನಾಗರಾಜ್ ಅವರು ಅಲ್ಲಿ ಕುಳಿತುಕೊಳ್ಳುವುದು ಮತ್ತು ನಾವಿಲ್ಲಿ ಕುಳಿತುಕೊಂಡು ವ್ಯವಹಾರ ನಡೆಸುವುದು ಅಷ್ಟು ಚೆನ್ನಾಗಿ ಕಾಣುವುದಿಲ್ಲ. ಆದ್ದರಿಂದ ಅವರು ತಮ್ಮ ಆಸನಕ್ಕೆ ಹೋದರೆ ನಾನು ಒಂದೆರಡು ವಿಚಾರಗಳನ್ನು ಈಗ್ಗೆ ಹೇಳಲಿಕ್ಕೆ ಸಾಧ್ಯವಾಗುತ್ತದೆ. ಅಲ್ಲಿ ಹೋಗಿ ಕುಳಿತುಕೊಳ್ಳಿ. ಮನಸ್ಸಿಗೆ ತೃಪ್ತಿಯಾಗದಿದ್ದರೆ ಆಮೇಲೆ ಬೇಕಾದರೆ ಅಲ್ಲಿಗೆ ಬನ್ನಿ ನಿಮ್ಮನ್ನು ಅಲ್ಲಿ ಕೂರಿಸಿ ನಾವು ಇಲ್ಲಿ ನಿಂತು ಹೇಳಲು ನಮಗೆ ಬಹಳ ಮುಜುಗರವಾಗುತ್ತದೆ. ಆದ್ದರಿಂದ ಅಲ್ಲಿ ಹೋಗಿ ಕುಳಿತುಕೊಳ್ಳಿ, ತಮಗೆ ಸಮಾಧಾನವಾಗದಿದ್ದರೆ ಪುನಃ ಬನ್ನಿ.

(ವಾಟಾಳ್ ನಾಗರಾಜ್‌ರವರು ತಮ್ಮ ಸ್ಥಳಕ್ಕೆ ಹೋದರು.)

ಮುಖ್ಯಮಂತ್ರಿಗಳಿಂದ ಹೇಳಿಕೆ